Regd No Bo 155

13-10-1969

SATYAVADI Daily MYSORE 4 53 rd Year of Publication

ಸುವರ್ಣ ಮಹೋತ್ಸವ ನಡೆಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಆರಮನೆ ಶಿರಸ್ತೇದಾರ್ ಎಂ. ವಿ ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಸೆಸೆ

ಕಾವೇರಿ ನೀರು ಬಗೆ ಮುಖ್ಯ ಮಂತ್ರಿಗಳ ಮಾತುಕತೆ

ರೊಮೇನಿಯಾ ಅಧ್ಯಕ್ಷರು

ನವದೆಹಲಿ— ರೊಮೇನಿಯಾ ಅಧ್ಯಕ್ಷ ನಿಕೊಲೆ ನಿಸೆಸ್ಕು ಮತ್ತು ಪ್ರಧಾನಿ ಜಾರ್ಜೆ ಮೌರರ್ ಭಾರತ ನಾಯಕರೊಡನೆ ಒಂದು ವಾರದ ಮಾತುಕತೆಗೆ ಇಂದು ಬರಲಿರುವರು - ಅವರು ಆಗ್ರಾ, ಬೆಂಗಳೂರು ಮೈಸೂರಿಗೂ ಭೇಟಿ ಕೊಡುವರು.

●

ಅಶಿಸ್ತಿಗೆ ಸ್ಥಾನವಿಲ್ಲ

ನವದೆಹಲಿ— ಪಾರ್ಟಿ ಅಶಿಸ್ತಿಗೆ ಸ್ಥಾನವಿಲ್ಲವೆಂದು ತಮಿಳುನಾಡು ಕಾಂಗ್ರೆಸ್ ಸಮಿತಿ ನಿರ್ಧರಿಸಿದೆ.

○

ನೀರಿನ ವ್ಯಾಜ್ಯ

ಮದರಾಸು— ಕಾವೇರಿ ನೀರಿನ ವ್ಯಾಜ್ಯ ಬಗ್ಗೆ ಮದರಾಸು ಮತ್ತು ಮೈಸೂರು ಮುಖ್ಯ ಮಂತ್ರಿಗಳು ಮಾತುಕತೆ ನಡೆಸಬೇಕೆಂದು ಕೇಂದ್ರ ನೀರಾವರಿ ಮಂತ್ರಿ ಡಾ || ಕೆ ಎಲ್ ರಾವ್‌ರವರ ಸಲಹೆಯನ್ನು ಮುಖ್ಯ ಮಂತ್ರಿ ಕರುಣಾನಿಧಿಯವರು ಒಪ್ಪಿರುವರು.

●

ರಷ್ಯಾ – ಚೀನಾ

ಹಾಂಕಾಂಗ್— ಸಿಂಕಿಯಾಂಗ್, ಚಂಪೊದ್ವೀಪಗಳ ಮೇಲೆ ಚೀನಾ ಸ್ವಾಮಿತ್ವ ಬಗ್ಗೆ ರಷ್ಯಾ ಬೇಷರತ್ ಮನ್ನಣೆ ಕೊಡಲು ತಿರಸ್ಕರಿಸಿದೆ.

○

ಚೀನಾ – ಭಾರತ

ಹಾಂಕಾಂಗ್— ಚೀನಾವು ಭಾರತದೊಡನೆ ಗಡಿ ಸಮಸ್ಯೆ ಚರ್ಚಿಸಲು ಹಿಂದಕ್ಕಿಂತಲೂ ಈಗ ಹೆಚ್ಚು ಸಿದ್ಧವಿದೆ.

★

ಸ್ವಲ್ಪ ಪರಿಹಾರ ದೊರೆತೀತು

ನವದೆಹಲಿ— ತ್ಯಾಗಿಯವರ 5 ನೇ ಆರ್ಥಿಕ ಆಯೋಗದ ಶಿಫಾರಸಿನಿಂದ ಪ್ರತಿಕೂಲ ಪರಿಣಾಮಕ್ಕೆ ತುತ್ತಾದ ಕೇರಳ ಮತ್ತು ಮೈಸೂರಿಗೆ ಪ್ರಸ್ತು ವರ್ಷದಲ್ಲಿ ಸ್ವಲ್ಪ ಪರಿಹಾರ ನೀಡುವ ಪ್ರಶ್ನೆಯನ್ನು ಕೇಂದ್ರ ಪರ್ಯಾಲೋಚಿಸುತ್ತಿದೆ.

★

ಆಯುಧವಿಲ್ಲದೆ ಸ್ವಾತಂತ್ರ

ಪಂಜಿ— ಆಯುಧ ಉಪಯೋಗಿಸದೆ ವಿದೇಶೀ ಆಡಳಿತದಿಂದ ಸ್ವಾತಂತ್ರ್ಯ ಪಡೆದ ಪ್ರಪ್ರಥಮ ದೇಶವಾಗಿದೆಯೆಂದೂ, ನಂತರ ಈ ಮಾರ್ಗ ಅನುಸರಿಸಿ ಆನೇಕ ದೇಶಗಳು ಸ್ವಾತಂತ್ರ್ಯ ಗಳಿಸಿದವೆಂದೂ ಪ್ರಧಾನಿ ಇಂದಿರಾ ತಿಳಿಸಿದರು.

★

ಡೈಸಲ್ ಕಾರ್

ಮೈಸೂರು–ಬೆಂಗಳೂರು ಮಧ್ಯೆ ನಿಲ್ಲದೆ ಸರಿಯುವ ಡೈಸಲ್ ಕಾರ್ ಓಡಾಟ ಈ ವರ್ಷದ ಕಡೆಯೊಳಗೆ ಆಗುವ ಸಂಭವವಿದೆ.

★

ಕ್ರಿಕೆಟ್ ಪಂಧ್ಯ ಸಂಬಂಧದಲ್ಲಿ

ಹುಬ್ಬಳ್ಳಿ— ಕಟ್ಟಕಡೆ ಜೋನಲ್ ಕ್ರಿಕೆಟ್ ಪಂಥದಲ್ಲಿ ನಿನ್ನೆ ಎರಡು ಗುಂಪಿನ ವಿದ್ಯಾರ್ಥಿಗಳಲ್ಲಿ ಘರ್ಷಣೆ ಕಲ್ಪಿಸತವಾಗಿ ನಾಲ್ಕು ಮಂದಿ ವಿದ್ಯಾರ್ಥಿಗಳು ಗಾಯಗೊಂಡರು.

★

ರಾಜ್ಯಗಳಿಗೆ ನೆರವು

ನವದೆಹಲಿ— ಕೇಂದ್ರ ವಸತಿ, ನಗರಾಭಿವೃದ್ಧಿ ಇಲಾಖೆಯು 12 ರಾಜ್ಯಗಳಿಗೆ ರೂ 10 60 ಕೋಟಿ ನೆರವು ನೀಡಿದೆ.

ದಸರಾ

ನಿನ್ನೆ ಶ್ರೀಮನ್ಮಹಾರಾಜರವರು ಅರಮನೆಯಲ್ಲಿ ಬೆಳಿಗ್ಗೆ 11–40 ಕ್ಕೆ ಸಿಂಹಾಸನಾರೋಹಣ ಮಾಡಿದರು : ಸಂಜೆ 7 ಗಂಟೆಗೆ ರಾಜ್ಯಸಭೆ ನಡೆಯಿತು : ತಾ || 20 ರವರೆಗೆ ದಿನವೂ ಸಂಜೆ 7 ಕ್ಕೆ ರಾಜ್ಯಸಭೆ ನಡೆಯುವುದು ; ತಾ|| 20 ಸಂಜೆ 4–24 ಗಂಟೆಗೆ ಬನ್ನೀಮಂಟಪಕ್ಕೆ ಜಂಬೂಸವಾರಿ ಮೆರವಣಿಗೆ.

○

ನಿನ್ನೆ ಬೆಳಿಗ್ಗೆ ವಸ್ತುಪ್ರದರ್ಶನ ಪ್ರಾರಂಭೋತ್ಸವವನ್ನು ಹಂಗಾಮಿ ಗೌರ್ನರ್ ಶ್ರೀ ಸೋಮನಾಥ ಅಯ್ಯರ್‌ರವರು ನೆರವೇರಿಸಿದರು.

★

ಶ್ರೀ ರಂಗನಾಥಸ್ವಾಮಿ ದೇವಾಲಯ

ಶ್ರೀರಂಗ— ಶ್ರೀ ರಂಗನಾಥಸ್ವಾಮಿ ದೇವಾಲಯದ ಪುನರ್ರಚನೆಗೆ ತಮಿಳುನಾಡು ಸರ್ಕಾರ್ ರೂ 1 ಲಕ್ಷ ಮಂಜೂರ್ಯಾಡಿದೆ.

★

ಬೈಲು ರಂಗಮಂಟಪ

ಮೈಸೂರು ಟೌನ್‌ಹಾಲ್ ಪಶ್ಚಿಮ ಭಾಗದಲ್ಲಿ ಪೌರಸಭೆಯವರು ಕಟ್ಟಿಸಿರುವ ಬಯಲು ಮಂಟಪವನ್ನು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಉದ್ಘಾಟಿಸಿದರು.

——

ಮಹಿಳಾ ಡಾಕ್ಟರುಗಳು

ಹುಬ್ಬಳ್ಳಿ— ಹೌಸ್ ಸರ್ಜನ್ನರ ಸಂಘ ದಡೆಸಿದ ಚರ್ಚಾಕೂಟದಲ್ಲಿ, ಡಾಕ್ಟರುಗಳು ಮಹಿಳಾ ಡಾಕ್ಟರುಗಳನ್ನು ವರಿಸಬೇಕೆ ಎಂಬ ಪ್ರಶ್ನೆಗೆ ಸರ್ವಾನುಮತದಿಂದ ನಕಾರ ನೀಡಲಾಯಿತು.

ಇಬ್ಬರು ನಾಯಕರು

ನವದೆಹಲಿ— ಕಾಶ್ಮೀರಿ ನಾಯಕ ಷೇಕ್ ಅಬ್ದುಲ್ಲರು, ಫರ್ಕ್ಟೂ ನಾಯಕ ಖಾನ್ ಅಬ್ದುಲ್ ಗಫಾರ್ ಖಾನರನ್ನು ಕಂಡು ಕೆಲವು ನಿಮಿಷ ಮಾತುಕತೆ ನಡೆಸಿದರು – ಏನು ಮಾತೋ ಹೊರಪಟ್ಟಲ್ಲ.

——

ಹಾಸನ ಮಂಗಳೂರು ರೈಲು

ಹಾಸನ-ಮಂಗಳೂರು ರೈಲ್ವೇ ಲೈನಿನಲ್ಲಿ ಶೇಕಡ 40 ಮುಗಿದಿದೆಯೆಂದೂ 1972 ಕಡೆಯೊಳಗೆ ಪೂರ್ತಾ ಮುಗಿಯುವ ಸಂಭವವಿದೆಯೆಂದೂ ರೈಲ್ವೆ ಡಿವಿಜನಲ್ ಸೂಪರಿಂಟೆಂಡೆಂಟ್ ಹೇಳಿದರು.

★

ಕೈಗಾರಿಕೆಗಳಿಗೆ ಸಹಾಯ

ಹುಬ್ಬಳ್ಳಿ— ದಡೇಲಿಯಲ್ಲಿ ಹಿರಿಯ ಮತ್ತು ಕಿರಿಯ ಕೈಗಾರಿಕೆ ಸ್ಥಾಪಿಸುವವರಿಗೆ ಸಾಧ್ಯವಾದ ಎಲ್ಲಾ ಸಹಾಯವನ್ನೂ ಸರ್ಕಾರ ನೀಡುವದೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು.

★

ಸ್ಪೆಷಲ್ ರೈಲುಗಳು

ಮೈಸೂರು— ದಸರಾ ಮಹೋತ್ಸವ ಕಾಲದಲ್ಲಿ ರೈಲ್ವೆಯವರು ಮೈಸೂರು–ಬೆಂಗಳೂರು ಮಧ್ಯೆ 33 ಸ್ಪೆಷಲ್ ರೈಲುಗಳನ್ನು ಬಿಡುವರು.

★ ಕೊಚ್ಚಿ—ಗೇರುಪ್ಪೊಪ್ಪಿನಿಂದ ಮದ್ಯ ತಯಾರಿಸಲು ಕೇರಳ ಮತ್ತು ಮೈಸೂರು ರಾಜ್ಯಗಳು ಲೈಸನ್ಸು ಕೊಡಲಿವೆ.

★ ಸಿರಸಿ—ಈಗಿನ ವಿದ್ಯಾ ಪದ್ಧತಿಯು ನಕರಲ್ಲಿ ಭರವಸೆ ಹುಟ್ಟಿಸುವದರಲ್ಲಿ ವಿಫಲಗೊಂಡಿದೆ ಎಂದು ಅರ್ಥ ಸಚಿವ ಶ್ರೀ ರಾಮಕೃಷ್ಣ ಹೆಗ್ಡೆ ಹೇಳಿದರು.

ಕಂಪ್ಯೂಟರುಗಳು

ನವದೆಹಲಿ— ಈ ಶತಮಾನದ ಕಡೆಯೊಳಗೆ ಜನರು ಜೇಬಿನಲ್ಲಿಟ್ಟುಕೊಳ್ಳಬಹುದಾದ ಕಂಪ್ಯೂಟರುಗಳು ಜೊತೆಯಬಹುದೆಂದು ಹೇಳಲಾಗಿದೆ – ಕಂಪ್ಯೂಟರಿನೊಡನೆ ಮಾತನಾಡುವುದು ಸಾಧ್ಯವಾಗಬಹುದೆನ್ನಲಾಗಿದೆ – 1995ರ ಹೊತ್ತಿಗೆ ಮನೆಗಳಲ್ಲಿ ಕಂಪ್ಯೂಟರುಗಳು, ಟೆಲಿಫೋನ್ ಮತ್ತು ಟೆಲಿವಿಜನ್‌ಗಳನ್ನು ಇಟ್ಟುಕೊಳ್ಳುವಂತೆ ಹೊಂದುವುದು ಸರ್ವಸಾಧಾರಣವಾಗಬಹುದೆನ್ನಲಾಗಿದೆ.

— — —

ಸ್ಮರಣಾರ್ಹ ತಾರೀಖುಗಳು

ಮಧುರೆಯು 1736 ರವರೆಗೆ ಮೈಸೂರು 1761 ರವರೆಗೆ, ತಂಜಾವೂರು 1799 ರವರೆಗೆ ಹಿಂದೂ ಸರ್ಕಾರದಲ್ಲಿದ್ದವು.

ಈ ವಿಷಯ ಅನೇಕರಿಗೆ ಗೊತ್ತಿಲ್ಲ. ಆಂದಬಳಿಕ, ಉತ್ತರದ ಪ್ರದೇಶಗಳ 1210 ರಲ್ಲಿ, ಬೀಹಾರು ಅದಕ್ಕೂ ಮುಂಚೆ ತಮ್ಮ ಸ್ವಾತಂತ್ರ್ಯ ಕಳೆದುಕೊಂಡಿದ್ದರೂ, ದಕ್ಷಿಣವು 200 ವರ್ಷಗಳಿಗೂ ಕಡಮೆವರೆಗೆ ಸ್ವತಂತ್ರವಾಗಿತ್ತು.

ಭೀಕರ ಪಂಜಾಬಿಗಳು, ಯುದ್ಧಾಕಾಂಕ್ಷಿ ಜಾಠರು, ವೀರ ರಜಪೂತರು ಮತ್ತು ಉತ್ತರ ಪ್ರದೇಶದ ಬಲಾಢ್ಯ ಜನರೂ, ಮುಸ್ಲಿಂರ ಅಡಳಿತಕ್ಕೆ 700 ವರ್ಷಗಳ ಹಿಂದೆಯೇ ತುತ್ತಾದರು : ಆದರೆ ತಮಿಳುನಾಡಿನ ಅನೇಕ ಭಾಗಗಳ ಜನರು 200 ವರ್ಷಗಳಿಗೂ ಕಡಮೆ ಅವಧಿಗೆ ವಿದೇಶೀ ಅಡಳಿತ ಅರಿತಿರಲಿಲ್ಲ.

ಭಾರತದ ಅನೇಕ ಹಳೇ ರಾಜ್ಯಗಳಲ್ಲಿ ಅಸ್ಸಾಂ ಎಂದೂ ವಿದೇಶೀ ಅಡಳಿತದಲ್ಲಿ ಇರಲಿಲ್ಲವೆಂದೂ, ಅದನ್ನು ಗೆಲ್ಲಲು ಮುಸ್ಲಿಂರ ಭೀಕರ ಪ್ರಯತ್ನಗಳೂ ವಿಫಲಗೊಂಡವೆಂದೂ ಗೊತ್ತಾಗಿದೆ.

ಅಖಿಲ ಭಾರತದಲಿ ಕೊಡಲೇ ಗೋವಧೆ ನಿಷೇಧವಾಗಲಿ

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರೆಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಆದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ದೇಶದ ಹಿತಕ್ಕಾಗಿ

ಕುಟುಂಬ ಯೋಜನೆ

SHAKTI SUDHA

A Superb Tonic

ವುಡ್‌ಲಾಂಡ್ ತಾ.10-10-69 ರಿಂದ

ಶಿನ್ನ ಅಮೋಘ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —

ಹಸೀನಾ ಮಾನ್ ಜಾಯೇಗಿ

ಶಶೀಕಪೂರ್ ಬಬೀತಾ ಜಾನಿವಾಕರ್

ಸಂಗೀತ : ಕಲ್ಯಾಣಜಿ ಆನಂದಜಿ

[ದಿನ 3 ಪ್ರದರ್ಶನಗಳು]

ಆಪೆರಾ ತಾ 10-10-69 ರಿಂದ

.... ಅಮೋಘ ತಮಿಳು ಚಿತ್ರ ....

ಎಂಗವೀಟ್ಟು ಪಿಳ್ಳೈ

ಪಾತ್ರ— ಎಂ. ಜಿ. ಆರ್ ಬಿ. ಸರೋಜಾದೇವಿ ಎಸ್. ವಿ. ರಂಗರಾವ್
ನಾಗೇಶ್ ತಂಗವೇಲು (ಹೊಸ ಕಾಪಿ)

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿನ ರೀತಿಯಲ್ಲಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore